ಅವನ ಕಣ್ಣೆದುರು ಪತ್ನಿ ನೀಲಾಂಬಿಕಾ ದೇವಿಯ ಸುಂದರ ವದನಾರವಿಂದ ಹಾದು ಹೋಯಿತು. ನೀಳ ಜಡೆಯ, ನೀಳ ದೇಹದ, ನೀಳ ಕೈಗಳ ನಿರಾಭರಣ ಸುಂದರಿ ನಿಲಾಂಬಿಕಾದೇವಿ ಧರೆಗಿಳಿದ ಅಪ್ಸರ ಸ್ತ್ರೀಯಂತೆ ಕಂಗೊಳಿಸುತ್ತಿದ್ದಳು. ಎಂತಹ ಚಂಚಲ ಚಿತ್ತರೂ ಅವಳನ್ನು ಕಂಡಾಗ ಗೌರವದಿಂದ ಕೈ ಮುಗಿಯುವಂತಹ ಗಾಂಭೀರ್ಯ ಅವಳದು. ಅಪ್ಪಾಜಿರಾಜನ ಪಟ್ಟದರಸಿಯಾದರೂ ಅವಳು ಯಾವುದೇ ದರ್ಪ ತೋರಿಸುತ್ತಿರಲಿಲ್ಲ. ಹಾಳು ಹರಟೆಯಲ್ಲಿ ಸಮಯ ಹಾಳು ಮಾಡದೆ ತಾನಾಯಿತು ತನ್ನ ಕಾರ್ಯವಾಯಿತು ಎಂದು ನಿರ್ಲಿಪ್ತಳಾಗಿ ಇರುತ್ತಿದ್ದಳು.

ಅವಳು ಕೊಡಗರ ಹೆಣ್ಣು. ಅವಳ ಮೂಲ ನಾಮಧೇಯ ಮುತ್ತಮ್ಮ. ದೊಡ್ಡ ವೀರಪ್ಪ ದೊರೆಯೇ ಅವಳು ಹಾಲೇರಿ ಮನೆತನಕ್ಕೆ ಸರಿಯಾದ ಸೊಸೆ ಎಂದು ನಿರ್ಧರಿಸಿ, ತನ್ನ ಪತ್ನಿಯ ಮತ್ತು ಪುತ್ರನ ಸಂಪೂರ್ಣ ಒಪ್ಪಿಗೆಯಿಂದ ಅರಮನೆ ತುಂಬಿಸಿಕೊಂಡಿದ್ದ. ದೊಡ್ಡ ವೀರಪ್ಪ ದೊರೆಯ ಪತ್ನಿ ಕೂಡಾ ಮೂಲತಃ ಕೊಡಗರವಳೇ. ಆದುದರಿಂದ ಅತ್ತೆ ಸೊಸೆಯರು ತಾಯಿ ಮಗಳಂತಿದ್ದರು. ಕೊಡಗರ ಹೆಣ್ಣು ಮುತ್ತಮ್ಮ ಶಿವಾಚಾರದ ನಿಲಾಂಬಿಕಾ ದೇವಿಯಾಗಿ ಮತಾಂತರಗೊಂಡು ತನ್ನ ಗುಣ ನಡತೆಯಿಂದ ಎಲ್ಲರ ಪ್ರೀತಿಗೆ ಪಾತ್ರಳಾಗಿದ್ದಳು. ಅಪ್ಪಾಜಿರಾಜನಿಗೆ ಅವಳ ಮೇಲೆ ಗೌರವಯುತವಾದ ಪ್ರೀತಿಯಿತ್ತು. ತನ್ನ ಪಟ್ಟದರಸಿ ನೀಲಾಂಬಿಕಾದೇವಿ ಅರಮನೆಯೆದುರಿನ ಕೊಳಕ್ಕೆ ಹಾರಿ ಆತ್ಮಹತ್ಯೆಗೈದಾಳೆಂಬ ಸಣ್ಣ ಸುಳಿವೂ ಅವನಿಗೆ ಸಿಕ್ಕಿರಲಿಲ್ಲ. ಅನಗತ್ಯವಾಗಿ ಅವಳು ಆತ್ಮಹತ್ಯೆ ಮಾಡಿಕೊಂಡು ತನ್ನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಾಳೆ ಮತ್ತು ಪುಟ್ಟ ಬಾಲಕ ಚಿಕ್ಕವೀರಪ್ಪನನ್ನು ನಿರ್ದಯವಾಗಿ ಅನಾಥನನ್ನಾಗಿ ಮಾಡುತ್ತಾಳೆ ಎಂದು ಅವನು ಕನಸು ಮನಸಲ್ಲೂ ಊಹಿಸಿರಲಿಲ್ಲ.

"ಯುವರಾಜರು ಮೌನವಾಗಿರುವುದೇಕೆ? ತಪ್ಪನ್ನು ಒಪ್ಪಿಕೊಳ್ಳುತ್ತೀರೇನು?"

ಭವ್ಯಾಕೃತಿಯ, ಎತ್ತರದ ನಿಲುವಿನ, ಆಜಾನುಬಾಹು ದೊಡ್ಡ ವೀರಪ್ಪ ದೊರೆಯದ್ದು, ಧೀರ ಗಂಭೀರ ಸ್ವರ. ಅವನು ದನಿ ಏರಿಸಿ ಮಾತಾಡಿದರೆ ಆಳ್ವೆದೆಯವರ ಎದೆ ಬಿರಿಯಬೇಕು. ಅಪ್ಪನ ಗಡಸುದನಿಗೆ ಅಪ್ಪಾಜಿರಾಜ ಹೆದರಿ ನಡುಗಿಬಿಟ್ಟ.

"ಇಲ್ಲ ಇಲ್ಲ. ನಾನು ತಪ್ಪು ಮಾಡಿಲ್ಲ. ನೀಲಾಂಬಿಕಾ ದೇವಿ ನನ್ನ ಧರ್ಮಪತ್ನಿ. ಲಿಂಗಧಾರಣೆ ಮಾಡಿ ಶಿವಾಚಾರದವಳಾಗಿ ನಿಮ್ಮೆಲ್ಲರ ಸಮ್ಮತಿಯಂತೆ ಅರಮನೆ ತುಂಬಿದವಳು. ಈ ಚಿಕ್ಕ ವೀರಪ್ಪನನ್ನು ಹಡೆದು ಕೊಡಗಿಗೆ ಒಬ್ಬ ಉತ್ತರಾಧಿಕಾರಿಯನ್ನು ಕೊಟ್ಟವಳು. ಮೆಚ್ಚಿ ಮದುವೆಯಾದವಳನ್ನು ಕೊಲ್ಲಲು ನನಗೆ ಕಾರಣಗಳೇ ಇಲ್ಲ. ನ್ಯಾಯವನ್ನು, ಧರ್ಮವನ್ನು, ಲೋಕ ರೂಢಿಯನ್ನು ಬಲ್ಲ ನಿಮ್ಮೆಲ್ಲರೆದುರು ನನ್ನ ಏಕಮಾತ್ರ ಪುತ್ರ ಈ ಚಿಕ್ಕ ವೀರಪ್ಪನ ತಲೆಯ ಮೇಲೆ ಕೈಯಿಟ್ಟು ಪ್ರಮಾಣ ಮಾಡಿ ಹೇಳುತ್ತಿದ್ದೇನೆ. ಅಣ್ಣ ಬಸವಣ್ಣನವರ ಪಾದಸಾಕ್ಷಿಯಾಗಿಯೂ ನಾನು ರಾಣಿ ನೀಲಾಂಬಿಕಾ ದೇವಿಯನ್ನು ಕೊಂದಿಲ್ಲ."

ಅಪ್ಪಾಜಿ ರಾಜ ಸ್ವರತಗ್ಗಿಸಿ ಮಾತಾಡಿದ. ದೊಡ್ಡ ವೀರಪ್ಪ ದೊರೆ ಸ್ವರ ಏರಿಸಿದ.

"ಯುವರಾಜರು ತಮ್ಮ ಕೈಯಾರೆ ನೀಲಾಂಬಿಕಾ ದೇವಿಯನ್ನು ಕೊಂದು ಕೊಳಕ್ಕೆ ಎಸೆದದ್ದು ಎಂದು ನ್ಯಾಯಪೀಠ ಹೇಳುತ್ತಿಲ್ಲ. ವಿಶಾಲ ಕೊಡಗಿನ ಮುಂದಿನ ಮಹಾರಾಣಿಯಾಗಿ, ರಾಜಮಾತೆಯಾಗಿ ಮೆರೆಯಬೇಕಿದ್ದ ನೀಲಾಂಬಿಕಾ ದೇವಿ ಅರಮನೆಯೆದುರಿನ ಕೊಳಕ್ಕೆ ಹಾರಿ ಪ್ರಾಣ ಕಳೆದುಕೊಳ್ಳಲು ಪ್ರೇರಣೆ ಏನು? ಯಾರಾದರೂ ಏನೂ ಕಾರಣವಿಲ್ಲದೆ ಪ್ರಾಣಕಳಕೊಳ್ಳುತ್ತಾರೆಯೆ? ಯುವರಾಜರು ತಮ್ಮ ಪಟ್ಟದ ರಾಣಿಯನ್ನು ನ್ಯಾಯಯುತವಾಗಿ ನಡೆಸಿಕೊಂಡಿದ್ದರೆ ಅಂತಹ ಪರಿಸ್ಥಿತಿ ಉದ್ಭವಿಸುತ್ತಿತ್ತೇ? ಆತ್ಮಹತ್ಯೆಗೆ ಪ್ರೇರಣೆ ನೀಡಿದ್ದರೆ ಅದನ್ನು ಕೊಲೆಯೆಂದು ಪರಿಗಣಿಸಬೇಕಾಗುತ್ತದೆ. ನೀಲಾಂಬಿಕಾ ದೇವಿಯವರದು ಸಹಜ ಸಾವಲ್ಲ. ಈ ಅಸಹಜ ಸಾವಿನ